ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ನವೆಂಬರ್ ತಾ|| 8, -ಸ್ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರುವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಿರ್ಮಾಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡಿ ಸಲ್ಲತಕ್ಕ ಬಗ್ಗೆ; ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಫೇಸ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಬ್ಲಿ ಕೇಟಾದ ಡಿವಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಫೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡಿರ್ಸ,
ಕಾಂಪ್ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್‌ಜಡ್ಜ್‌ರಯವರ ಕೋರ್ಟ್‌ನಲ್ಲಿ.

ದಿವಾಳಿಯಾದ ಡಿಕ್ರಿ ದೇನೇದಾರ ಗುಬ್ಬಿ ಸ್ಥಳದ ಸಂಜೀವಯ್ಯನ ವಿಷಯದಲ್ಲಿ.

ಸ್ 1884ನೇ ಇಸವಿ ದಿವಾಳಿ ವ್ಯಾಜ್ಯ ನಂಬರ್ 42.

ಹುಕುಂ.

ಮೇಲ್ಕಂಡ ಸಂಜೀವಯ್ಯನು ಖುಲಾಸೆಯಾಗಬೇಕೆಂದು ಕೋರಿ ಬರಮಾಡಿಕೊಂಡ ಅರ್ಜಿಯು ಸಬ್ ಜಡ್ಜ್‌ರಾದ ಸಿ. ಕೈಸ್ ಸಾಹೇಬರವರ ರೂಬರೂ ಅರ್ಜೀದಾರನ ಪರವಾಗಿ ಸಮಕ್ಷಮದಲ್ಲಿಯೂ ಮತ್ತು ಐರ್ಜ ಅರ್ಜೀದಾರನ ಲೇಣೇದಾರರಾದ 1ನೇ ಮದೋಡಪ್ಪನ ಕಡೆ

ಫ್ಲೀಡರ್ ನರಸಿಹ್ಮಾಚಾರ್ರ್ ಯದುರಾಗಿಯೂ ದರ್ಖಾಸ್ತ್ ಮಾಡಲ್ಪಟ್ಟಿತು. ಈ ಕೆಳಗೆ ನಮೂದ್ಮಾಡಲ್ಪಡುವ ಲೇಣೇದಾರ್ರಿಗೆ ಈ ದರ್ಖಾಸ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ತಾವೇ ಖುದ್ದಾಗಿಯಾಗಲಿ ಲಾಯರ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ, 2ನೇ ಕೆಂಪನಂಜಪ್ಪ, 3ನೇ ಲಿಂಗಪ್ಪಟ್ಟಿ.

ಸದರೀ ಸಂಜೀವಯ್ಯನು ದಿವಾಳಿಯಾದವನೆಂದುನ್ನೂ ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನ ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದೂ ಇದರಿಂದ ತೀರ್ಮಾನಿಸಲ್ಪಟ್ಟಿರುತದೆ. ಈ ಕೋರ್ಟು ಹೆಡ್ ಮುನಷಿಯನ್ನು ಜಾಮೀನು ಕೊಟ್ಟು ಕೂಡ್ಲೆ ಖರ್ಜ ದಿವಾಳಿಯಾದವನ ಜಿಂದಿಗಿಗೆ ರಿಸೀವರಾಗಿ ಮೊಕರರ್ರಾಜಲ್ಪಡತಕ್ಕದ್ದೆಂದುನ್ನೂ ಸದರೀ ರಿಸೀವರಾದವನು ವಡನೇ ದಿವಾಳಿಯಾದವನ ಜಿಂದಗಿಗೆ ಜವಾಬ್ ಮಾಡತಕ್ಕ ಬಗ್ಯೂ ನಿಗೆವಾನಿ ಮಾಡತಕ್ಕ ಬಗ್ಯೂ ಸಹ ಕೋರ್ಟಿನವರಿಂದ ಮುಂದೆ ಆರಡರ್ ನಿರೀಕ್ಷಣೆಯಿಂದ ಮಂಜುರ್ಮಾಡಬಹುದಾದಂಥಾ ಇಬ್ಬರು ಅಥವಾ ಹೆಚ್ಚು ಸಂಖ್ಯಾಕವಾದ ಲಾಯಖ್ ಜಾಮೀನುದಾರರೊಡನೆ ಸಾಕಾದಷ್ಟು ಈಡಿನಿಂದ ಪತ್ರವನ್ನ ಬರದುಕೊಟ್ಟು ತನ್ನ ರಿಸೀವರ ಕೆಲಸಗಳಿಗೆ ವುದ್ಯುಕ್ತ ಪಡತಕ್ಕದ್ದೆಂದುನ್ನೂ ಮತ್ತು ಸದರೀ ರಿಸೀವರನು ತಾನು ನಡಿಸಿದ ಕೆಲಸಗಳ ಪ್ರತಿಫಲಕ್ಕಾಗಿ ದಿವಾಳಿಯಾದವನ ಲೇಣೇದಾರರಿಗೆ ಬಗ್ಗುವಾಜೆ ಮಾಡಿದ ಮೊಬಲಗಿನ ಬಾಕಿ ಹಣದಲ್ಲಿ ದರ ಕೈಕಡಾ— ರೂಪಾಯಿ ಮೇರೆ ಕಮ್ಮಿಷನ್ ನಿಲ್ಲಿಸಿಕೊಳ್ಳತಕ್ಕದ್ದೆಂದುನ್ನೂ ಸಹ ಹುಕುಂ ಮಾಡಲ್ಪಟ್ಟಿತ್ತು.

ಸ್ರ್ 1884ನೇ ಇಸವಿ ಆಗಸ್ಟ್ 14ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ ನಿಸಿ ಕೊಡಲ್ಪಟ್ಟಿತು.

ದಿವಾಳಿಯಾದ ಡಿಕ್ರಿ ದೇಣೇದಾರ ದೇವನಹಳ್ಳಿ ಕಸಬಾದಲ್ಲಿ ಯಿರುವ ಸೈದು ಯಿಮಾಮಿನ ವಿಷಯದಲ್ಲಿ.

ಸ್ರ್ 1884ನೇ ಇಸವಿ ದಿವಾಳಿ ಕೇಸ್ ನಂಬರು 84.

ಹುಕುಂ.

ಮೇಲ್ಕಂಡ ಸೈದ್ ಯಿಮಾಮನು ನಿರ್ಬಂಧದಿಂದ ಖುಲಾಸೆ ಆಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿ ಶ್ರೀ. ಕೈಸ್ ಸಾಹೇಬರವರ ರೂಬರೂ ಅರ್ಜೀದಾರನಾದ ಸೈದ್ ಯಿಮಾಮನನ್ನು ದರ್ಖಾಸ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಖಾಸ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋಗರು, ಯಾರಂದರೆ, ಕಲ್ಲಿಕೋಟೆ ಬೈತೂರುನಲ್ಲಿ ಯಿರುವ ಬೈರ್ಜ ಹುಸ್ಸೇನಸಾಬಿ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಸೈದ್ ಯಿಮಾಮನಾಬಿ ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ನತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವನಾಲಕ್ಕೂ ಕ್ರಸ್ತರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ರ್ 1884ನೇ ಇಸವಿ ಆಗಸ್ಟ್ 28ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ ನಿಸಿ ಕೊಡಲ್ಪಟ್ಟಿತು.

ಸೂಲದ ಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಜ್ಞಾಪಿಸಲಾಗಿರುವ ದೇಣೆಯ ಯಾವಾಗ ಹುಟ್ಟಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
	ಕಲ್ಲಿಕೋಟೆ ಬೈತೂರುನಲ್ಲಿ ಯಿರುವ ಬೈರ್ಜ ಹುಸ್ಸೇನಸಾಬಿ.	450—0—0 1883	ಬೈತೂರು ಮುನಸಿಫ್ ಕೋರ್ಟು 1883ನೇ ಇಸವಿ ಅರಜಿನಲ್ 180ನೇ ನಂಬರ್ ಡಿಕ್ರಿ ಬಾಬತು.	